**ಮುಖ್ಯ ನ್ಯಾಯಾಧೀಶರು, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

**ಎಂ.ವಿ.ಸಿ. ಸಂಖ್ಯೆಃ 6921/2025**

**PW-1**

| | |
|---|---|
| ಹೆಸರು | ಮನಿಷಾ.ಎಂ. |
| ಗಂಡನ ಹೆಸರು | ಸಗಯ್ ಅಕ್ಷಯ್ ದೀಪ್ |
| ವಯಸ್ಸು | **31** ವರ್ಷ |
| ವೃತ್ತಿ | ಕಾಗ್ನಿಸೆಂಟ್ ಕಂಪೆನಿಯಲ್ಲಿ ಸೀನಿಯರ್ ಅಸೋಸಿಯೇಟ್ |
| ವಿಳಾಸ | ಮಾದನಾಯಕನಹಳ್ಳಿ, ಬೆಂಗಳೂರು |

**ದಿನಾಂಕಃ 10.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಕ್ಕೆ ಬದಲಾಗಿ, ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ಮತ್ತು ಅದಕ್ಕೆ ಅನುಸಾರವಾಗಿ ನನ್ನ ವಕೀಲರು ಸಿದ್ಧಪಡಿಸಿದ್ದಾರೆ.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊಕದ್ದಮೆ ನಂಃ **123/2025** ರಲ್ಲಿ

ದಾಖಲಾಗಿರುವ ಪ್ರಥಮ ವರ್ತಮಾನ ವರದಿಯದ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, ದೂರಿನ ಧೃಡೀಕೃತ ನಕಲನ್ನು ನಿ.ಪಿ.**2** ಎಂದು, ಪೋಲಿಸ್ ಇಂಟಿಮೇಷನ್ ನ ಧೃಡೀಕೃತ ನಕಲನ್ನು ನಿ.ಪಿ.**3** ಎಂದು, ಸ್ಥಳ ಪಂಚನಾಮೆಯ ಧೃಡೀಕೃತ ನಕಲನ್ನು ನಿ.ಪಿ.**4** ಎಂದು, ಕಚ್ಚಾ ನಕ್ಷೆಯ ಧೃಡೀಕೃತ ನಕಲನ್ನು ನಿ.ಪಿ.**5** ಎಂದು, ಕಲಂ **133** ಐಎಂವಿ ಕಾಯ್ದೆ ರೀತ್ಯಾ ವಾಹನ ಮಾಲೀಕರಿಗೆ ನೀಡಲಾದ ಪೋಲಿಸ್ ನೋಟೀಸ್ ನ ಧೃಡೀಕೃತ ನಕಲನ್ನು ನಿ.ಪಿ.**6** ಎಂದು, ಅದಕ್ಕೆ ಮಾಲೀಕರು ನೀಡಿರುವ ಪ್ರತ್ಯುತ್ತರದ ಧೃಡೀಕೃತ ನಕಲನ್ನು ನಿ.ಪಿ.**7** ಎಂದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಸಲ್ಲಿಸಿರುವ ಅಂತಿಮ ವರದಿಯ ಧೃಡೀಕೃತ ನಕಲನ್ನು ನಿ.ಪಿ.**8** ಎಂದು, ಐಎಂವಿ ವರದಿಯ ಧೃಡೀಕೃತ ನಕಲನ್ನು ನಿ.ಪಿ.**9** ಎಂದು ಗುರುತಿಸಿದ್ದೇನೆ.

3) ಗಾಯದ ಪ್ರಮಾಣ ಪತ್ರದ ಧೃಡೀಕೃತ ನಕಲನ್ನು ನಿ.ಪಿ.**10** ಎಂದು, ಇಂಡೆಮ್ ನಿಟಿ ಬಾಂಡ್ ನ ಧೃಡೀಕೃತ ನಕಲನ್ನು ನಿ.ಪಿ.**11** ಎಂದು, ದಿ:**16.08.2025** ರ ಒಂದು ಪೋಲಿಸ್ ನೋಟೀಸ್ ನ ಧೃಡೀಕೃತ ನಕಲನ್ನು ನಿ.ಪಿ.**12** ಎಂದು, ನಾನು ಅಮೃತ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ದಿ:**07.08.2025** ರಿಂದ ದಿ:**10.08.2025** ರ ವರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿ.ಪಿ.**13** ಎಂದು,

ವೈದ್ಯಕೀಯ ಖರ್ಚು ರೂ.**33,809/-** ಕ್ಕೆ ಸಂಬಂಧಿಸಿದಂತೆ **8** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**14** ಎಂದು ಗುರುತಿಸಿದ್ದೇನೆ. ಮೆಡಿಕಲ್ ಬಿಲ್ಲುಗಳನ್ನು ಐ.ಪಿ. ಬಿಲ್ ನಲ್ಲಿ ಸೇರಿಸಿಕೊಳ್ಳಲಾಗಿದೆ. **8** ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**15** ಎಂದು ಗುರುತಿಸಿದ್ದೇನೆ. ಅಮೃತ ಆಸ್ಪತ್ರೆಯವರು ನೀಡಿರುವ ಒಂದು ಸರ್ಟಿಫಿಕೇಟ್ ಅನ್ನು ನಿ.ಪಿ.**16** ಎಂದು ಗುರುತಿಸಿದ್ದೇನೆ.

4) ದಿಃ **04.07.2025** ರಂದು ಸಲ್ಲಿಸಲಾಗಿರುವ ಒಂದು ಆದಾಯ ತೆರಿಗೆ ತಖ್ತೆಯ ಪ್ರತಿಯನ್ನು ನಿ.ಪಿ.**17** ಎಂದು ಗುರುತಿಸಿದ್ದೇನೆ.

5) ನನ್ನ ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿ.ಪಿ.**18** ಎಂದು ಗುರುತಿಸಿದ್ದೇನೆ. **(**ಸಾಕ್ಷಿಯು ಆಧಾರ್ ಕಾರ್ಡಿನ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನೋಟರೀಕೃತ ನಕಲಿನೊಂದಿಗೆ ಹೋಲಿಸಿದ ನಂತರ ಸಾಕ್ಷಿಗೆ ಹಿಂತಿರುಗಿಸಲಾಗಿದೆ**).**

**ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದಾರೆ. ನ್ಯಾಯ ಹಿತರಕ್ಷಣೆಯ ದೃಷ್ಟಿಯಿಂದ ಸಮಯಾವಕಾಶ ನೀಡಲಾಗಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.